**<u>ಪಿ.ಡಬ್ಲೂ -1</u>**

**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 29-11-2023</u>**

**ಪಾಟೀ ಸವಾಲುಃ ಶ್ರೀ ಡಿ ಎನ್ ಜೆ ಆರೋಪಿ ಪರ ವಕೀಲರಿಂದಃ**

ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ನಮ್ಮ ಒಟ್ಟು ಕುಟುಂಬದ ಎರಡುವರೆ ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ನಾನು ತರಕಾರಿ ಬೆಳೆಯನ್ನು ಬೆಳೆಯುತ್ತೇವೆ. ವಾರ್ಷಿಕವಾಗಿ ನನಗೆ ಸುಮಾರು 50 ಸಾವಿರ ರೂಪಾಯಿ ಆದಾಯ ಬರುತ್ತದೆ. ಸದರಿ ಆದಾಯದಲ್ಲೇ ನಮ್ಮ ಮನೆ ಖರ್ಚು ವೆಚ್ಚಗಳನ್ನು ನಿಬಾಯಿಸುತ್ತೇವೆ ಎಂದರೆ ಸಾಕ್ಷಿಯು ಬೇರೆ ಆದಾಯವು ಬರುತ್ತದೆ ಎಂದು ನುಡಿಯುತ್ತಾರೆ. ನಾನು ಆದಾಯತೆರಿಗೆ ಪಾವತಿದಾರನಲ್ಲ. ಆರೋಪಿ ನನ್ನ ಸ್ನೇಹಿತ. ಆರೋಪಿ ಸೋಲೂರು ಗ್ರಾಮದವರು. ಆರೋಪಿ ಮನೆಯಲ್ಲಿ ಎಷ್ಟು ಜನ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಕಟಿಂಗ್ ಶಾಪ್ ಇಟ್ಟುಕೊಂಡಿರುತ್ತಾರೆ.

2. ಆರೋಪಿ ಸೆಪ್ಟೆಂಬರ್ 2016 ರಲ್ಲಿ ನನ್ನ ಬಳಿ ಹಣ ಕೇಳಿರುತ್ತಾರೆ. ಅರೋಪಿ ಮೊದಲೇ ನನಗೆ ಹಣ ಕೇಳಿದ್ದು, ನಾನು ನಂತರ ಹಣವನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,
ದೇವನಹಳ್ಳಿ.